ಮಾತಾಡಿಸಲಿಲ್ಲ. ನಾನು ಅವರವನಲ್ಲವೇನೋ. ಕೆಲವರಂತೂ ನನ್ನತ್ತ ತಿರುಗಿಯೂ ನೋಡಲಿಲ್ಲ. ನಾನು ಅವರಂತಹವನಲ್ಲವೇನೋ.

ಪೂರ್ತಿ ಬೆಳಕಾಯಿತು. ಈಗ ಸುತ್ತಲೆಲ್ಲವೂ ನಿಚ್ಚಳ. ನನ್ನ ಕುತೂಹಲ ಕೆರಳಿಸಿದ್ದು ಅಂತ್ಯವೇ ಇಲ್ಲದ ದಾರಿ ಒಂದು ಕಡೆ ಸುತ್ತಲೂ ನನಗೇನೂ ಕಾಣಿಸದಂತೆ ನನ್ನನ್ನು ಮುಳುಗಿಸಿದ ಒಂದು ತಗ್ಗಿನಲ್ಲಿ ಕುಕ್ಕರಗಾಲಿನಲ್ಲಿ ಕುಳಿತಿದ್ದ ಒಬ್ಬಳು ಮುದುಕಿ. ಅವಳು ನನ್ನತ್ತ ನೋಡಿ ಮುಗುಳ್ನಕ್ಕಿದ್ದಳು, ನಾನು ಕಣ್ಣರಳಿಸಿದ್ದೆ. ನನ್ನ ಅಚ್ಚರಿ, ಅಪನಂಬಿಕೆ, ಕುತೂಹಲಕ್ಕೆ ಹಲವು ಕಾರಣಗಳಿದ್ದವು.

ಮೊದಲಿಗೆ, ನನ್ನಂತಹ ಮನುಷ್ಯಜೀವಿಯೊಂದು ನಗಬಲ್ಲುದು ಎನ್ನುವುದೇ ನನಗೆ ಮರೆತುಹೋಗಿದ್ದ ಜೀವನವ್ಯಾಪಾರ. ಅದೆಷ್ಟೋ ದೂರ ನನ್ನನ್ನು ಸಾಗಿಸಿದ ದಾರಿ ಹೀಗೆ ಸುತ್ತಲ ಜಗತ್ತಿನಿಂದ ಮುಳುಗಿಸಿಬಿಟ್ಟಾಗ ನಾನು ದಾರಿ ತಪ್ಪಿದ್ದೇನೆಯೇ ಎಂದು ನನಗೆ ಅನುಮಾನವಾದದ್ದು ಸಹಜವೇ. ಹಿಂದೆ ತಿರುಗಿ ನೋಡಿದೆ. ನಾನು ಬಂದ ದಾರಿ ಈ ತಗ್ಗಿಗೇ ಇಳಿದಿರುವುದು, ಇಲ್ಲಿಂದ ನನ್ನನ್ನು ಮೇಲೆ ಕರೆದೊಯ್ಯಲು ತಯಾರಾಗಿರುವಂತೆ ಮುಂದೆ ಮೇಲೇರಿರುವುದು ಕಂಡು ಸಮಾಧಾನಗೊಂಡೆ. ಮುದುಕಿ ತುಟಿಯರಳಿಸಿದಳಷ್ಟೇ. ಅವಳಿಂದ ಮಾತು ಹೊರಟಿರಲಿಲ್ಲ. ಪ್ರಾಗೈತಿಹಾಸಿಕ ಕಾಲದವಳಂತೆ ಕಂಡ ಅವಳ ಭಾಷೆ ಮೃತಭಾಷೆಯಾಗಿರಬೇಕು. ಮಾತಿನ ಮೂಲಕ ನನ್ನನ್ನು ತಲುಪಲಾಗದೆಂದು ಅವಳಿಗೆ ತಿಳಿದಿರಬೇಕು. ಗತ ಕಥೆ ಕಟ್ಟುತ್ತದೆ, ಪಟ್ಟಾಂಗ ಹೊಡೆಯುತ್ತಾ ಕಾಲಿಗೆ ಕುಣಿಕೆ ಕಟ್ಟಿ ಪಕ್ಕದಲ್ಲೇ ಕೂರಿಸಿಕೊಳ್ಳುವುದಿಲ್ಲ ಎನ್ನುವುದು ಇದುವರೆಗಿನ ನನ್ನ ತಿಳಿವು. ಹೀಗಾಗಿ ನಾನೂ ಸುಮ್ಮನೆ ಅತ್ತಿತ್ತ ನೋಡಿದೆ. ಹೇಗೂ ತಗ್ಗಿಗೆ ಇಳಿದಾಗಿದೆ, ಕಣ್ಣಿಗಿಳಿಯುವಷ್ಟು ಕಂಡೇಬಿಡೋಣ.

ಮುದುಕಿಯ ಜತೆ ಮೂವರು ಮಕ್ಕಳಿದ್ದರು. ಇಬ್ಬರು ಹುಡುಗರು, ಒಬ್ಬಳು ಹುಡುಗಿ. ಮೂವರೂ ಬೆತ್ತಲಾಗಿದ್ದರು. ತಮ್ಮ ಪಾಡಿಗೆ ತಾವು ಜೇಡಿಮಣ್ಣಿನಲ್ಲಿ ಏನೇನೋ ಗೊಂಬೆಗಳನ್ನು ಮಾಡುತ್ತಿದ್ದರು.

"ಏನು ಹುಡುಕಿ ಹೊರಟಿರುವೆ?" ಅಂದಳು ಮುದುಕಿ. ಮುದುಕಿ ಮಾತಾಡಿದ್ದಳು! ನನ್ನ ಅಚ್ಚರಿ ಮುಗಿಲು ಮುಟ್ಟಿತು. ಜತೆಗೇನೋ ಆತಂಕ. ಎಲ್ಲೋ ಏನೋ ಸರಿ ಇಲ್ಲ ಎನ್ನುವ ಕಳವಳ ಎದೆಯಾಳದಲ್ಲಿ ಹೊರಳಾಡಿತು. ಧೈರ್ಯಗೂಡಿಸಿಕೊಂಡೆ. ನಾನು ಈ ತಗ್ಗಿನಿಂದ ಮೇಲೇರಬೇಕೇ ಅಥವಾ ಇಲ್ಲಿಯೇ ಉಳಿದುಬಿಡಬೇಕೇ ಎನ್ನುವುದನ್ನು ತಿಳಿಯಲು ನಾನೂ ಈಗ ಮಾತಿಗಿಳಿಯಬೇಕು. ಹಣ್ಣು ಮುದುಕಿಯ ಪ್ರಶ್ನೆಯನ್ನು ನೆನಪಿಸಿಕೊಂಡೆ.

"ಬದುಕನ್ನು" ಅಂದೆ. "ನನಗದು ಕಂಡೇ ಇಲ್ಲ" ಅಂತಲೂ ಸೇರಿಸಿದೆ ಸಣ್ಣಗೆ. ಅವಳು ನಕ್ಕುಬಿಟ್ಟಳು. "ಬದುಕು ಅಂದರೆ ಹುಡುಕಿ ಹೊರಟರೆ ಸಿಗುವ ಸರಕಲ್ಲ. ಅಲೆಮಾರಿಗೆ ಸಿಗುವುದು ಹಲ್ಲುಗಳಷ್ಟೇ. ಅಲೆಮಾರಿಯನ್ನು ಕಾಲ ನೋಡುವುದು ಬಲಿಗೆ ಕಾದಿರುವ ಬಕರಾ ಅಂತ. ಹಲ್ಲುಗಳನ್ನು ಮಸೆಯುತ್ತಾ ಅದು ಅವನನ್ನು ಹಿಂಬಾಲಿಸುತ್ತಿರುತ್ತದೆ. ಮುಹೂರ್ತ ಕೂಡಿಬಂದೊಡನೇ ಮುಗಿಬೀಳುತ್ತದೆ, ಮುರಿದು ಮುಕ್ಕುತ್ತದೆ, ತಿಂದು ತೇಗಿ ಅರಗಿಸಿಕೊಮಡು ಇನ್ನೆಲ್ಲೋ ಹೋಗಿ ಹೇತುಬಿಡುತ್ತದೆ. ಅದರ ಬದಲು ನಿಂತಲ್ಲಿ ನೆಲೆ ಕಂಡುಕೊಂಡರೆ ಕಾಲದ ಹಲ್ಲುಗಳು ಸವೆಯತೊಡಗುತ್ತವೆ, ಬೆರಳುಗಳು ಬಲಗೊಳ್ಳುತ್ತವೆ, ಸುತ್ತಲೂ ಬದುಕು ಬೆಳೆಯುತ್ತದೆ. ಅದು ನಿನ್ನೊಂದಿಗೆ ಸ್ಪರ್ಧೆಗಿಳಿಯುತ್ತದೆ. ಆಗ ಈ ಮರ್ತ್ಯಲೋಕವೊಂದು ರೋಚಕ ಆಟದ ಮೈದಾನವಾಗುತ್ತದೆ!" ಅಂದಳು ಗಂಭೀರವಾಗಿ. ಅವಳೇನು ಹೇಳುತ್ತಿದ್ದಾಳೆಂದು ನನಗೆ ಅರ್ಥವಾಗಲಿಲ್ಲ. ಅವಳಿಗದು ಅರ್ಥವಾಗಿರಬೇಕು, ಮುಂದಿದ್ದ ಮಕ್ಕಳತ್ತ ಕೈ ತೋರಿದಳು.

ಮೊದಲನೆಯ ಬಾಲಕ ತೆಳ್ಳಗಿನ ನೀಳ ಮೈಯವನು. ಅವನು ಮಾಡುತ್ತಿದ್ದುದು ಬಾಗಿದ ಚೂಪು ಜೋಡಿ ಹಲ್ಲುಗಳು, ಮೇಲೊಂದು ಜೋಡಿ ಕೆಳಗೊಂದು ಜೋಡಿ. ಬಣ್ಣ ಕಡು ಹಳದಿ. ನೋಡಲು ಚಂದ ಇದ್ದವು. ಆದರೆ, ಕೆಳಗೇನೋ ನೀಲಿ ಬಣ್ಣದ ಪುಟ್ಟ ಚೀಲದಂತಹದು ಜೋತು ಬಿದ್ದಿದ್ದನ್ನು ಕಂಡಾಗ ಏನೋ ಅನುಮಾನವಾಯಿತು. ದೂರವೇ ನಿಂತೆ.

ಗುಂಡುಗುಂಡಗಿದ್ದ ಇನ್ನೊಬ್ಬ ಉದ್ದುದ್ದನೆಯ ನಾಲ್ಕು ಬಲವಾದ ಕೋರೆಹಲ್ಲುಗಳನ್ನು ಮಾಡಿ ನಿಲ್ಲಿಸುತ್ತಿದ್ದ, ಮೇಲೆರಡು ಕೆಳಗೆರಡು. ಅವುಗಳಿಗೆ ಚಂದದ ನಸುಹಳದಿ ಬಣ್ಣವಿದ್ದರೂ ಆಕಾರ ಮಾತ್ರ ಭಯ ಹುಟ್ಟಿಸುತ್ತಿತ್ತು. ಹತ್ತಿರ ಹೋಗದಿರುವುದೇ ಕ್ಷೇಮ.

ಹೇಳಿ ಮಾಡಿಸಿದಂತಹ ಮೈಲಕ್ಷಣದ ಹುಡುಗಿ